ಅಧ್ಯಾಯ - II

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ರಚನೆ

3. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ರಚನೆ :- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು "ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ" ಎಂಬ ಹೆಸರಿನಿಂದ ಕರೆಯಲಾಗುವ ತನ್ನ ಕೇಂದ್ರ ಕಾರ್ಯಸ್ಥಾನವನ್ನು ಬೆಂಗಳೂರಿನಲ್ಲಿ ಹೊಂದಿರುವ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು,

(ಎ) ಉಚ್ಚನ್ಯಾಯಾಲಯದ ನ್ಯಾಯಮೂರ್ತಿಯಾಗಿರುವ ಅಥವಾ ನ್ಯಾಯಮೂರ್ತಿಯಾಗಿದ್ದ ಒಬ್ಬ ಅಧ್ಯಕ್ಷ;

(ಬಿ) ಸಮಾಜ ವಿಜ್ಞಾನಿ ;

(ಸಿ) ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿಶೇಷ ಜ್ಞಾನವುಳ್ಳ ನಾಲ್ವರು ವ್ಯಕ್ತಿಗಳು ; ಇವರನ್ನು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡತಕ್ಕದ್ದು ಮತ್ತು

(ಡಿ) ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು ಆಯೋಗದ ಸದಸ್ಯ - ಕಾರ್ಯದರ್ಶಿಯಾಗಿರತಕ್ಕುದು ;

4. ಅಧ್ಯಕ್ಷ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು : (1) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು ಅಧ್ಯಕ್ಷ ಮತ್ತು ಪ್ರತಿಯೊಬ್ಬ ಸದಸ್ಯನು, ಅವನು ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೇಳು ವರ್ಷ ವಯಸ್ಸಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಅಧ್ಯಕ್ಷ ಅಥವಾ ಸದಸ್ಯನು ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಯಾವುದೇ ಸಮಯದಲ್ಲಿ ಅಧ್ಯಕ್ಷ ಅಥವಾ ಸಂದರ್ಭಾನುಸಾರ ಸದಸ್ಯನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು.

(3) ಒಬ್ಬ ವ್ಯಕ್ತಿಯು ಈ ಮುಂದಿನವುಗಳಿಗೊಳಗಾಗಿದ್ದರೆ ರಾಜ್ಯ ಸರ್ಕಾರವು ಅವನನ್ನು ಅಧ್ಯಕ್ಷನ ಅಥವಾ ಸದಸ್ಯನ ಸ್ಥಾನದಿಂದ ತೆಗೆದುಹಾಕತಕ್ಕದ್ದು,

(ಎ) ಅವಿಮುಕ್ತ ದಿವಾಳಿಯಾದರೆ;

(ಬಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಒಳಗಾಗಿದ್ದರೆ ;

(ಸಿ) ಅಸ್ವಸ್ಥಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದ್ದರೆ ;

(ಡಿ) ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ;

(ಇ) ಆಯೋಗದಿಂದ ಗೈರು ಹಾಜರಾಗುವುದಕ್ಕೆ ಅನುಮತಿಯನ್ನು ಪಡೆದುಕೊಳ್ಳದೆ ಆಯೋಗದ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದರೆ ಅಥವಾ

(ಎಫ್) ಅವನು ಪದದಲ್ಲಿ ಮುಂದುವರಿಯುವುದರಿಂದ ಹಿಂದುಳಿದ ವರ್ಗಗಳು ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವಾಗುವ ರೀತಿಯಲ್ಲಿ ತನ್ನ ಅಧ್ಯಕ್ಷ ಅಥವಾ ಸದಸ್ಯನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿರುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ :

ಪರಂತು, ಈ ಖಂಡದಡಿ ಯಾವೊಬ್ಬ ವ್ಯಕ್ತಿಗೆ ಪ್ರಸ್ತಾವದ ವಿರುದ್ಧ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶ ಕೊಟ್ಟ ಹೊರತು ಅವನನ್ನು ತೆಗೆದು ಹಾಕತಕ್ಕದ್ದಲ್ಲ.

(4) (2)ನೇ ಉಪಪ್ರಕರಣದಡಿ ಅಥವಾ ಅನ್ಯಥಾ ರಿಕ್ತತೆಯುಂಟಾದಲ್ಲಿ ಅದನ್ನು ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ತುಂಬತಕ್ಕದ್ದು.

(5) ಅಧ್ಯಕ್ಷ ಮತ್ತು ಸದಸ್ಯರಿಗೆ ಸಂದಾಯ ಮಾಡಬಹುದಾದ ವೇತನಗಳು ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

5. ಆಯೋಗದ ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳು : (1) ರಾಜ್ಯ ಸರ್ಕಾರವು ಆಯೋಗದ ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಅವಶ್ಯಕವಾಗಬಹುದಾದಂಥ ಅಧಿಕಾರಿಗಳು ಮತ್ತು ಉದ್ಯೋಗಿಗಳನ್ನು ಆಯೋಗಕ್ಕೆ ಒದಗಿಸತಕ್ಕದ್ದು.

(2) ಆಯೋಗದ ಉದ್ದೇಶಕ್ಕಾಗಿ ನೇಮಕ ಮಾಡಿಕೊಳ್ಳಲಾದ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳು ಮತ್ತು ಅವರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

6. ವೇತನಗಳು ಮತ್ತು ಭತ್ಯೆಗಳನ್ನು ಅನುದಾನಗಳಿಂದ ಸಂದಾಯ ಮಾಡುವುದು : ಅಧ್ಯಕ್ಷ ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನಗಳು ಮತ್ತು ಭತ್ಯೆಗಳನ್ನು ಮತ್ತು 5ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳಿಗೆ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ವಿಶ್ರಾಂತಿ ವೇತನಗಳೂ ಸೇರಿದಂತೆ ಆಡಳಿತ ವೆಚ್ಚಗಳನ್ನು 12ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅನುದಾನಗಳಿಂದ ಸಂದಾಯ ಮಾಡತಕ್ಕದ್ದು.

7. ರಿಕ್ತತೆ ಇತ್ಯಾದಿಗಳು ಆಯೋಗದ ವ್ಯವಹರಣೆಗಳನ್ನೂ ಅನೂರ್ಜಿತಗೊಳಿಸತಕ್ಕದ್ದಲ್ಲ : ಆಯೋಗದ ಯಾವುದೇ ಕೃತ್ಯ ಅಥವಾ ವ್ಯವಹರಣೆಗಳನ್ನು ಆಯೋಗದಲ್ಲಿನ ರಿಕ್ತತೆ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ ಕಾರಣ ಮಾತ್ರದಿಂದಲೇ ಅನೂರ್ಜಿತಗೊಳಿಸತಕ್ಕದಲ್ಲ.

8. ಆಯೋಗದಿಂದ ವಿನಿಯಮಿಸಬೇಕಾದ ಕಾರ್ಯವಿಧಾನ : (1) ಆಯೋಗವು ಅವಶ್ಯಕವಾದಾಗಲೆಲ್ಲಾ ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಮತ್ತು ಅಧ್ಯಕ್ಷರು ಸೂಕ್ತವೆಂದು ಭಾವಿಸುವಂಥ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು.

(2) ಆಯೋಗವು ಅದರ ಕಾರ್ಯವಿಧಾನವನ್ನು ವಿನಿಯಮಿಸತಕ್ಕದ್ದು.

(3) ಆಯೋಗದ ಎಲ್ಲ ಆದೇಶಗಳು ಮತ್ತು ತೀರ್ಮಾನಗಳನ್ನು ಸದಸ್ಯ - ಕಾರ್ಯದರ್ಶಿ ಅಥವಾ ಈ ಪರವಾಗಿ ಸದಸ್ಯ - ಕಾರ್ಯದರ್ಶಿಯು ಸೂಕ್ತವಾಗಿ ಪ್ರಾಧಿಕರಿಸಿದ ಆಯೋಗದ ಇತರ ಯಾರೇ ಅಧಿಕಾರಿಯು ಅಧಿಕೃತಗೊಳಿಸತಕ್ಕದ್ದು.